## 2011-2012ನೇ ಸಾಲಿಗೆ ಕ್ರೀಡಾಕೂಟಗಳು

- ಜುಲೈ 2011 ರಿಂದ ಶಾಲಾಮಟ್ಟದ ಆಯ್ಕೆ ಮತ್ತು ವಲಯ/ಕ್ಲಸ್ಟರ್ ಮಟ್ಟದ ಕ್ರೀಡಾಕೂಟಗಳು
- ಆಗಸ್ಟ್ 2011 ರಲ್ಲಿ ತಾಲ್ಲೂಕು ಮತ್ತು ನೇರವಾಗಿ ನಡೆಸುವಂತೆ ಜಿಲ್ಲಾಮಟ್ಟದ ಕ್ರೀಡಾಕೂಟ/ಪಂದ್ಯಾವಳಿಗಳು.
- ಸೆಪ್ಟೆಂಬರ್ 2011 ರಲ್ಲಿ ಜಿಲ್ಲಾಮಟ್ಟ ಮತ್ತು ವಿಭಾಗಮಟ್ಟ ಅವಶ್ಯವಿರುವ ರಾಜ್ಯಮಟ್ಟದ ಕ್ರೀಡೆಗಳನ್ನು ಸಂಘಟಿಸುವುದು.
- ಅಕ್ಟೋಬರ್ 2011ರಲ್ಲಿ ರಾಜ್ಯಮಟ್ಟ ಮತ್ತು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುವ ಕ್ರೀಡಾಪಟುಗಳಿಗೆ ತರಬೇತಿ ಹಾಗೂ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದು.
- ಈ ಎಲ್ಲಾ ಕ್ರೀಡಾಕೂಟಗಳಿಗೆ ತಾಲ್ಲೂಕು ಹಂತದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರುಗಳು ಜವಾಬ್ಧಾರಿ ವಹಿಸಿ ಬಿ.ಆರ್.ಸಿ, ಸಿ.ಆರ್.ಸಿ, ಶಿಕ್ಷಣ ಸಂಯೋಜಕರುಗಳ ಸಹಕಾರದೊಂದಿಗೆ ಕ್ರೀಡಾಕೂಟಗಳನ್ನು ಸಂಘಟಿಸಿ ಮುಂದಿನ ಹಂತಕ್ಕೆ ಫಲಿತಾಂಶಪಟ್ಟಿ ಕಳುಹಿಸಿಕೊಡಬೇಕು.
- ಕ್ರೀಡಾಕೂಟ ನಡೆಸುವ ಮೊದಲು ಸಾಕಷ್ಟು ಪೂರ್ವಭಾವಿ ಸಭೆ ನಡೆಸಿ ಸಲಹೆ ಸೂಚನೆ ಗಳನ್ನು ನೀಡಿ ತಯಾರಿ ಮಾಡಿಕೊಳ್ಳುವುದು.
- ವಯೋಮಿತಿ ಆಧಾರದ ಮೇಲೆ ವ.14 ಮತ್ತು ವ.17 ಬಾಲಕ/ಬಾಲಕಿಯರಿಗೆ ಕ್ರೀಡಾಕೂಟ ನಡೆಸಬೇಕಾಗಿರುವುದರಿಂದ ಗುರುತಿನಚೀಟಿ ಕಡ್ಡಾಯಗೊಳಿಸಿ ವಲಯಮಟ್ಟದಿಂದಲೇ ಗುರುತಿನಚೀಟಿಯ ನಕಲು ಪ್ರತಿಯನ್ನೂಸಹಾ ಪಡೆದು ಆಂಗ್ಲ ಭಾಷೆಯಲ್ಲಿಯೇ ಭರ್ತಿ ಮಾಡಿರಬೇಕು.
- ಜಿಲ್ಲಾ ಹಂತದಲ್ಲಿ ನಡೆಯುವ ಜಿಲ್ಲಾಮಟ್ಟ/ವಿಭಾಗಮಟ್ಟ/ರಾಜ್ಯಮಟ್ಟದ ಕ್ರೀಡಾಕೂಟಗಳು ನಡೆಯುವ ಸಂದರ್ಭಗಳಲ್ಲಿ ಉಪನಿರ್ದೇಶಕರು ಹಾಗು ಜಿಲ್ಲಾ ದೈಹಿಕಶಿಕ್ಷಣಾಧಿಕಾರಿಗಳು ಹಾಜರಿದ್ದು ಮೇಲ್ವಿಚಾರಣೆ ನಡೆಸಬೇಕು.
- ಇಲಾಖೆ ಸೂಚನೆಯಂತೆ ಮುಂದಿನ ಹಂತಕ್ಕೆ ಎಲ್ಲಾ ದಾಖಲೆಗಳೊಂದಿಗೆ ಸಮಯಕ್ಕೆ ಸರಿಯಾಗಿ ರಾಷ್ಟ್ರಮಟ್ಟದ ಕ್ರೀಡಾಕೂಟಗಳಿಗೆ ಹೋಗಲು ಅನುಕೂಲವಾಗುವಂತೆ ತಂಡಗಳನ್ನು ಕಳುಹಿಸಿಕೊಡಬೇಕು.
- ರಾಜ್ಯವಿದ್ಯಾರ್ಥಿ ಕ್ರೀಡಾನಿಧಿ ಮಹಾಮಂಡಳ ಸಭೆಯ ತೀರ್ಮಾನಗಳನ್ನು ಮಾರ್ಗಸೂಚಿಯಲ್ಲಿ ನೋಡಿಕೊಂಡು ಅದಕ್ಕೆ ತಕ್ಕಂತೆ ಕ್ರೀಡಾಕೂಟ ನಡೆಸಲು ಕ್ರಮವಹಿಸಬೇಕು.
- ದೈಹಿಕ ಶಿಕ್ಷಣ ಶಿಕ್ಷಕರುಗಳಿಗೆ ತ್ರೈಮಾಸಿಕ ಕಾರ್ಯಾಗಾರಗಳನ್ನು ಏರ್ಪಡಿಸಿ ಬದಲಾದ ನಿಯಮಗಳನ್ನು ಹಾಗೂ ಎಲ್ಲಾ ಕ್ರೀಡೆಗಳ ನಿಯಮಾವಳಿಗಳನ್ನು ಚರ್ಚಿಸಿ ಪುನಶ್ಚೇತನಗೊಳಿಸುವುದು.
- ಜಿಲ್ಲಾಮಟ್ಟದಲ್ಲಿ ಶೈಕ್ಷಣಿಕ ಸಮ್ಮೇಳನ ನಡೆಸುವುದು.
- ಇಲಾಖೆಯ ಆದೇಶದಂತೆ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ಕ್ರೀಡಾನಿಧಿಯನ್ನು 100% ರಷ್ಟು ವಸೂಲಾತಿ ನಡೆಸಿ ಜಿಲ್ಲಾಮಟ್ಟದಲ್ಲಿ ಧೃಡೀಕರಿಸಿ ರಾಜ್ಯ ವಂತಿಗೆಯನ್ನು ಕಳುಹಿಸಿ ನಿಯಮಾನುಸಾರ ಜಿಲ್ಲಾಹಂತದಲ್ಲಿ ಆಯವ್ಯಯ ರಚಿಸಿಕೊಂಡು ಖರ್ಚು ಭರಿಸುವುದು.
- ಈಗಾಗಲೇ ದೈಹಿಕಶಿಕ್ಷಣ ಕಡ್ಡಾಯ ಮತ್ತು ಪರೀಕ್ಷಾ ವಿಷಯವಾಗಿದ್ದು ದೈಹಿಕಶಿಕ್ಷಕರು ದೈಹಿಕಶಿಕ್ಷಣ ವಿಷಯಬೋಧನೆಗೆ ಹೆಚ್ಚು ಒತ್ತು ನೀಡುವಂತೆ ಸಂಬಂಧಪಟ್ಟ ಮುಖ್ಯಶಿಕ್ಷಕರಿಗೆ ಸೂಚಿಸುವುದು.
- ಈಗಾಗಲೇ ದೈಹಿಕ ಶಿಕ್ಷಣದ ಅಭಿವೃದ್ಧಿಗೆ ಮುಂದುವರೆದ ಯೋಜನೆಯಡಿಯಲ್ಲಿ ಹಾಗೂ ಪ್ರೊ.ಎಲ್.ಆರ್.ವೈದ್ಯನಾಥನ್ ಸಮಿತಿ ಶಿಫಾರಸ್ಸಿನಡಿಯಲ್ಲಿ ಶಾಲೆಗಳಿಗೆ ನೀಡಿರುವ ಕ್ರೀಡಾಸಾಮಗ್ರಿಗಳನ್ನು ಕಡ್ಡಾಯವಾಗಿ ಬಳಸಲು ಕ್ರಮ ಕೈಗೊಳ್ಳುವಂತೆ ಆಯಾ ಶಾಲೆಯ ಮುಖ್ಯಶಿಕ್ಷಕರುಗಳಿಗೆ ಸೂಚಿಸುವುದು.
- ಒಂದು ಶಾಲೆಯಲ್ಲಿ ಕ್ರೀಡಾ ಸಾಮಗ್ರಿಗಳು ಯತೇಚ್ಚವಾಗಿದ್ದಲ್ಲಿ ಪಕ್ಕದ ಶಾಲೆಗಳಿಗೆ ನೀಡಿ ಉಪಯೋಗಿಸಿಕೊಳ್ಳಲು ಅವಕಶ ನೀಡಲು ಸೂಚಿಸುವುದು